52 ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ)
ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ) ತುಮಕೂರು ಜಿಲ್ಲೆ ತುರುವೇಕೆರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ಸರ್ಕಾರ ಕೈಗೊಂಡಿದೆಯೇ;;

ತುಮಕೂರು ಜಿಲ್ಲೆ ತುರುವೇಕೆರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ಸಣ್ಣ ನೀರಾವರಿ ಕೆರೆಗಳು ಇದ್ದು, ಈ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಂಡಿರುವುದಿಲ್ಲ.

ಆ) ಹಾಗಿದ್ದಲ್ಲಿ, ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಇ) ಹಾಗಿದ್ದಲ್ಲಿ, ಯಾವಾಗಿನಿಂದ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು?

ಅನುದಾನದ ಲಭ್ಯತೆಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು.

313 ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜನಗರ)
ಕಂದಾಯ ಸಚಿವರು.

ಅ) ಗದ್ದೀಗೌಡರ ವರದಿ ಪ್ರಕಾರ ರಾಜ್ಯದಲ್ಲಿ ಎಷ್ಟು ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು(ಜಿಲ್ಲಾವಾರು ವರದಿ ನೀಡುವುದು);

ಗದ್ದೀಗೌಡರ್ ಸಮಿತಿಯು ಒಟ್ಟಾರೆ 30 ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತದೆ. ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಆ) ಹೊಸ ತಾಲ್ಲೂಕುಗಳ ರಚನೆಯ ಪ್ರಕ್ರಿಯೆ ಯಾವ ಹಂತದಲ್ಲಿದೆ ಹಾಗೂ ತಾಲ್ಲೂಕುಗಳನ್ನು ರಚಿಸಲು ಇರುವ ಮಾನದಂಡಗಳೇನು;

ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಶ್ರೀ ಎಂ.ಬಿ.ಪ್ರಕಾಶ್ ರವರ ಅಧ್ಯಕ್ಷತೆಯಲ್ಲಿದ್ದ ತಾಲ್ಲೂಕು ಪುನರ್ ರಚನಾ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕಿದೆ.

ಇ) ಹೊಸ ತಾಲ್ಲೂಕುಗಳ ರಚನೆಯ ಬಗ್ಗೆ ಬಂದಿರುವ ಬೇಡಿಕೆಗಳ ವಿವರ ನೀಡುವುದು;

ರಾಜ್ಯದಲ್ಲಿ ಸುಮಾರು 138 ಹೊಸ ತಾಲ್ಲೂಕುಗಳ ರಚನೆಗಾಗಿ 1635 ಮನವಿಗಳು ಬಂದಿರುತ್ತವೆ.

ಈ) ಎಂ.ಬಿ.ಪ್ರಕಾಶ್ ರವರ ವರದಿಯನ್ವಯ ಹೊಸ ತಾಲ್ಲೂಕುಗಳ ಬಗ್ಗೆ ಪರಿಗಣಿಸಲು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು?

ವರದಿಯು ಪರಿಶೀಲನೆಯಲ್ಲಿದ್ದು, ಅಂತಿಮ ನಿರ್ಣಯ ತೆಗೆದು ಕೊಳ್ಳಬೇಕಿದೆ.

ವಿಧಾನ ಸಭೆ ಪ್ರಶ್ನೆ ಸಂ.313ಕ್ಕೆ ಅನುಬಂಧ

ತಾಲ್ಲೂಕುಗಳ ಪುನರ್ ವಿಂಗಡಣೆ ಬಗ್ಗೆ ಶ್ರೀ ಪಿ.ಸಿ.ಗದ್ದೀಗೌಡರು ಸಮಿತಿಯು ಶಿಫಾರಸ್ಸು ಮಾಡಿರುವ ವಿವರ

ಶ್ರೀ ಪಿ.ಸಿ.ಗದ್ದೀಗೌಡರ್ ಸಮಿತಿ	
1) ಹನೂರು(ಮೈಸೂರು ಜಿಲ್ಲೆ) (ಈಗ ಚಾಮರಾಜನಗರ ಜಿಲ್ಲೆ)	28) ಧರ್ಮಾಪುರ(ಚಿತ್ರದುರ್ಗ ಜಿಲ್ಲೆ)
2) ಮುಲ್ಕಿ(ದ.ಕ)	29) ನಿಪ್ಪಾಣಿ(ಬೆಳಗಾಂ ಜಿಲ್ಲೆ)
3) ಕಡಬ(ದ.ಕ)	30) ಲಕ್ಷ್ಮೇಶ್ವರ(ಧಾರವಾಡ ಜಿಲ್ಲೆ)
4) ಬೈಂದೂರು(ದ.ಕ)	
5) ಬ್ರಹ್ಮಾವರ(ದ.ಕ)	
6) ಮೂಡಬಿದ್ರೆ(ದ.ಕ)	
7) ಸಾತನೂರು(ಬೆಂಗಳೂರು ಜಿಲ್ಲೆ)	
8) ಕೆ.ಜಿ.ಎಫ್.ಪಟ್ಟಣ(ಕೋಲಾರ ಜಿಲ್ಲೆ)	
9) ಕಿತ್ತೂರು(ಬೆಳಗಾಂ ಜಿಲ್ಲೆ)	
10) ಬಾಬ್ಲೇಶ್ವರ(ಬಿಜಾಪುರ ಜಿಲ್ಲೆ)	
11) ನಿಡಗುಂದಿ(ಬಿಜಾಪುರ ಜಿಲ್ಲೆ)	
12) ತಾಳಿಕೋಟೆ(ಬಿಜಾಪುರ ಜಿಲ್ಲೆ)	
13) ಚಡಚಣ(ಬಿಜಾಪುರ ಜಿಲ್ಲೆ)	
14) ಗುಳೇದಗುಡ್ಡ(ಬಿಜಾಪುರ ಜಿಲ್ಲೆ)	
15) ಇಳಕಲ್ (ಬಿಜಾಪುರ ಜಿಲ್ಲೆ)	
16) ಗಜೇಂದ್ರಗಡ(ಧಾರವಾಡ ಜಿಲ್ಲೆ)	
17) ಗುಲ್ಬರ್ಗಾ(ಉ)	
18) ಯಡ್ರಾಮಿ(ಗುಲ್ಬರ್ಗಾ ಜಿಲ್ಲೆ)	
19) ಗುರುಮಿಟ್ಕಲ್(ಗುಲ್ಬರ್ಗಾ ಜಿಲ್ಲೆ)	
20) ವಡಗೇರಾ(ಗುಲ್ಬರ್ಗಾ ಜಿಲ್ಲೆ)	
21) ಹುಣಸಗಿ(ಗುಲ್ಬರ್ಗಾ ಜಿಲ್ಲೆ)	
22) ಶಹಬಾದ್(ಗುಲ್ಬರ್ಗಾ ಜಿಲ್ಲೆ)	
23) ಕಾಳಗಿ(ಗುಲ್ಬರ್ಗಾ ಜಿಲ್ಲೆ)	
24) ಬಳ್ಳಾರಿ (ಕೆ) (ಬಳ್ಳಾರಿ ಜಿಲ್ಲೆ)	
25) ಚಿಟಗುಪ್ಪ(ಬೀದರ್ ಜಿಲ್ಲೆ)	
26) ಕಾರಟಗಿ(ರಾಯಚೂರು ಜಿಲ್ಲೆ)	
27) ಮಸ್ಕಿ(ರಾಯಚೂರು ಜಿಲ್ಲೆ)	